ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No.2265/2021 CW-1

| | | |
|---|---|---|
| ಹೆಸರು | : | ಅಶೋಕ ಕುಮಾರ |
| ತಂದೆಯ ಹೆಸರು | : | ಪ್ರೇಮರಾಜ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಸಿಂಧನೂರು |

ದೋಷಾರೋಪಣೆ ಪೂರ್ವ ಸಾಕ್ಷಿಯ ವಿಚಾರಣೆ.

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 30-09-2023

### ಮುಖ್ಯ ವಿಚಾರಣೆಃ ದೂರುದಾರರ ಪರ ವಕೀಲರಿಂದ

ಆರೋಪಿತರ ಬಳಿ ನಾನು ಒಂದು ಚೀಟಿ ಹಾಕಿದ್ದೆ. ದಿಃ 03-04-2012 ರಂದು ನಾನು ರೂ.50,000/- ಕಟ್ಟಿದ್ದೆ. ಪ್ರತಿತಿಂಗಳು ಬೋನಸ್ ಕಟ್ಟಾಗಿ ನಾನು ಕಟ್ಟುತ್ತಿದ್ದೆ. ನನ್ನ ಕನ್ನಡಕ ಅಂಗಡಿಯಲ್ಲಿ 2 ನೇ ಆರೋಪಿಯು ಬಂದು ಹಣ ಪಡೆದುಕೊಂಡು ಹೋಗುತ್ತಿದ್ದ. 2 ನೇ ಆರೋಪಿಯು ಅದು ನೋಂದಾಯಿತ ಚೀಟಿ ಎಂದು ನನಗೆ ಹೇಳಿದ್ದ. ನಾನು 15 ನೇ ಚೀಟಿಯನ್ನು ಎತ್ತಿದ್ದೆ. ಅದು ರೂ.1,41,000/- ಗೆ ಹರಾಜು ಆಗಿತ್ತು. ಆರೋಪಿತರು ನನಗೆ ರೂ.8,59,000/- ಕೊಡಬೇಕಾಗಿತ್ತು. ಆದರೆ ಅವರು ನನಗೆ ಕೊಡಲಿಲ್ಲ. ಸುಮಾರು ಬಾರಿ ನಾನು ಆರೋಪಿತರ ಮನೆಗೆ ಹೋದೆ. ಆದರೂ ಸಹ ಅವರು ನನಗೆ ಹಣ ಕೊಡಲಿಲ್ಲ, ನಂತರ ನಾನು ಪೋ.ಠಾಣೆಗೆ ಹೋದೆ. ಆದರೆ ಪೋಲೀಸರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ ಆನಂತರ ನಾನು ನ್ಯಾಯಾಲಯಕ್ಕೆ ಬಂದು ದೂರು ಸಲ್ಲಿಸಿದ್ದೇನೆ. ಈ ಪ್ರಕರಣವನ್ನು ಏಕೆ ಸಲ್ಲಿಸಿದ್ದೇನೆ ನನಗೆ ಗೊತ್ತಿಲ್ಲ, ಆದರೆ ಹಣ ವಸೂಲಿಗಾಗಿ ಸಲ್ಲಿಸಿದ್ದೇನೆ. ಆರೋಪಿತರು ನನಗೆ ಹಣ ನೀಡಿರುವುದಿಲ್ಲ ಅವರು ಒಂದು ಚಿಕ್ಕ ವಹಿಯಲ್ಲಿ ನನ್ನ ಕಡೆಯಿಂದ ಹಣ ಪಡೆದುಕೊಂಡ ಬಗ್ಗೆ ಬರೆದುಕೊಟ್ಟಿದ್ದಾರೆ. (ಈ ಹಂತದಲ್ಲಿ ದೂರುದಾರರ ಪರ ವಕೀಲರು ಮೋಸ ಮಾಡಿದ್ದಾರೆ ಎಂದು ಹೇಳಿಕೊಟ್ಟಿದ್ದರಿಂದ ಸಾಕ್ಷಿಯು ಮೋಸ ಮಾಡಿದ್ದಾರೆ ಎಂದು ಹೇಳಿದ್ದಾರೆ).

ಆದ್ದರಿಂದ ಅವರ ಮೇಲೆ ಕ್ರಮ ಜರುಗಿಸಲು ಕೋರುತ್ತೇನೆ

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಅವರ ಕೋರಿಕೆಯಂತೆ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.